**ಸಿ.ಸಿ. ನಂಃ 182/2023**
**ಪಿ.ಡಬ್ಲ್ಯೂಃ 1**

**ಇವರಿಗೆ ಇಂದು ದಿನಾಂಕಃ 26-03-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ದೂರುದಾರರ ಪರ ಶ್ರೀ ಎಮ್. ಎಸ್. ಕೆ. ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಫಿರ್ಯಾದಿದಾರನಿದ್ದು, ನನ್ನ ಸತ್ಯಪೂರ್ವಕ ಹೇಳಿಕೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ ಹಾಗೂ ನನಗೆ ಓದಿ ಹೇಳಲಾಗಿರುತ್ತದೆ.

ಸಾಕ್ಷಿಯು ಆರೋಪಿತ ನೀಡಿದ ಚೆಕ್ಕನ್ನು ನೋಡಿ ಗುರುತಿಸಿದ್ದು ಚೆಕ್ಕನ್ನು ನಿಪಿಃ 1 ಎಂದು, ಹಾಗೂ ಅದರ ಮೇಲಿನ ಆರೋಪಿಯ ಸಹಿಯನ್ನು ನಿಪಿಃ1(ಎ) ಎಂದು, ಬ್ಯಾಂಕ ನೀಡಿದ ಮೇಮೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿಃ 2 ಎಂದು, ವಕೀಲರ ನೋಟೀಸಿನ ಕಚೇರಿಯ ಪ್ರತಿಯನ್ನು ನಿಪಿಃ 3 ಎಂದು, ಅಂಚೆ ರಶೀದಿಯನ್ನು ನಿಪಿಃ 4, ಅಂಚೆ ಸ್ವಿಕೃತಿಯನ್ನು ನಿಪಿಃ 5 ಹಾಗೂ ದಿನಾಂಕಃ 04-01-2023 ರ ತಿದ್ದುಪಡಿ ನೋಟಿಸು ಪ್ರತಿಯನ್ನು ನಿಪಿ-6, ಹಾಗೂ ಅಂಚೆ ರಶೀದಿಯನ್ನು ನಿಪಿ-7 ಎಂದು ಗುರುತಿಸಲಾಯಿತು.

ಪಾಟಿ ಸವಾಲು ಆರೋಪಿ ಪರ ಶ್ರೀ ಎಮ್. ಜಿ. ವಕೀಲರಿಂದ

1. ದೂರು, ನನ್ನ ಪ್ರಮಾಣ ಪತ್ರ ಹಾಗೂ ಎರಡು ನೋಟಿಸುಗಳಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ಈ ದೂರನ್ನು ಫಿರೋಜಾ ಬೇಗಂ ಇವರ ವಿರುದ್ಧ ದಾಖಲು ಮಾಡಿದ್ದೇನೆ. ನನಗೆ ಆರೋಪಿತಳ ಪರಿಚಯವಿದೆ. ನನಗೆ ನನ್ನ ಸಂಬಂಧಿಕರ ಮೂಲಕ ಆರೋಪಿತಳ ಪರಿಚಯವಾಗಿತ್ತು. ನನಗೆ ಸುಮಾರು 4 ವರ್ಷಗಳಿಂದ ಆರೋಪಿತಳ ಪರಿಚಯವಿದೆ. ನನಗೆ ಗೋಗಿ ಗ್ರಾಮದ ಕಾಳಪ್ಪ ಇವರ ಮೂಲಕ ಆರೋಪಿತಳ ಪರಿಚಯವಾಗಿತ್ತು. ಸದರಿ ಕಾಳಪ್ಪ ರವರು ನನ್ನ ಸಂಬಂಧಿಕ ಆಗಿರುವುದಿಲ್ಲ, ಆತ ನಮ್ಮ ಗ್ರಾಮದ ಬೇರೆಯವರ ಸಂಬಂದೀಕ ಆಗಿರುತ್ತಾರೆ. ನಾನು ಆರೋಪಿಯನ್ನು ಕಾನಹಳ್ಳಿ ಗ್ರಾಮದಲ್ಲಿ ಮೊದಲ ಬಾರಿಗೆ ಭೇಟಿಯಾಗಿದ್ದೇನು. ಯಾವ ವಿಷಯಕ್ಕೆ ಸಂಬಂದಿಸಿದಂತೆ ನಿಮಗೆ ಭೇಟಿಯಾಗಿದ್ದರು ಎಂದರೆ ಸಾಕ್ಷಿ ಸಾಲದ ಹಣಕ್ಕಾಗಿ ಭೇಟಿಯಾಗಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಮೊದಲ ಬಾರಿ ಭೇಟಿಯಾಗುವ ಪೂರ್ವದಲ್ಲಿ ನನಗೆ ಆರೋಪಿತಳ ಪರಿಚಯವಿರಲಿಲ್ಲ ಹಾಗೂ ನಮ್ಮ ನಡುವೆ ವ್ಯವಹಾರ ಇರಲಿಲ್ಲ ಎಂದರೆ ಸರಿ.

ಆರೋಪಿ ನನಗೆ ಭೇಟಿಯಾಗಿಲ್ಲ ಹಾಗೂ ನನಗೆ ಅವರ ಪರಿಚಯವಿಲ್ಲ ಎಂದರೆ ಸರಿಯಲ್ಲ.

2. ಆರೋಪಿತಳ ಮನೆ ಎಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿತಳ ಗಂಡನ ಹೆಸರು ಚಾವ್ರುಸ ಎಂದು ಇರುತ್ತದೆ. ನಾನು ಆರೋಪಿತಳ ಗಂಡನನ್ನು ನೋಡಿಲ್ಲ. ಆರೋಪಿತಳಿಗೆ ಎಷ್ಟು ಜನ ಮಕ್ಕಳು ಇದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿತಳನ್ನು ನಾನು ಈ ದಿನ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನಿಂದ ಹಣ ಪಡೆದುಕೊಳ್ಳುವಾಗ ಹಾಗೂ ಅದಾದ ನಂತರ ಹಿಂದಿನ ತಾರಿಖಿನಂದು ನ್ಯಾಯಾಲಯದಲ್ಲಿ ನೋಡಿದ್ದೇನು ಎಂದು ನುಡಿಯುತ್ತಾರೆ. ಆರೋಪಿ ಹಣ ಪಡೆದುಕೊಂಡ ನಂತರ ನಾನು ಅವರನ್ನು ನ್ಯಾಯಾಲಯದಲ್ಲಿಯೇ ನೋಡಿರುತ್ತೇನೆ. ನಾನು ಆರೋಪಿಯನ್ನು ಬೇರೆ ಎಲ್ಲಿಯೂ ನೋಡಿಲ್ಲ ಎಂದರೆ ಸರಿ.

3. ನಿಪಿ-1 ರ ಚೆಕ್ಕನ್ನು ನನಗೆ ಆರೋಪಿ ಕೊಟ್ಟಿದ್ದರು. ಸಾಕ್ಷಿಗೆ ನಿಪಿ-1 ರ ಚೆಕ್ಕನ್ನು ತೋರಿಸಿ ಅದರಲ್ಲಿನ ವಿವರಗಳನ್ನು ಯಾರು ಬರೆದಿದ್ದಾರೆ ಎಂದರೆ ಸಾಕ್ಷಿ ನಾನೇ ಬರೆದಿದ್ದೇನೆ ಎಂದು ನುಡಿಯುತ್ತಾರೆ. ಚೆಕ್ಕನಲ್ಲಿ ಮೊತ್ತವನ್ನೂ ಸಹ ನಾನೇ ನಮೂದಿಸಿದ್ದೇನೆ. ಚೆಕ್ಕನಲ್ಲಿ ಸಹಿ ಯಾರು ಮಾಡಿದ್ದಾರೆ ಎಂದರೆ ಸಾಕ್ಷಿ ಆರೋಪಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಚೆಕ್ಕನಲ್ಲಿನ ವಿವರಗಳನ್ನು ಬರೆಯುವಂತೆ ನಿಮಗೆ ಯಾರು ಹೇಳಿದ್ದಾರೆ? ಎಂದರೆ ಸಾಕ್ಷಿ ಬ್ಯಾಂಕಿನವರು ಹೇಳಿದ್ದರು ಎಂದು ನುಡಿಯುತ್ತಾರೆ. ನಿಪಿ-2 ರ ಹಿಂಬರಹದಲ್ಲಿ ನನ್ನ ಹೆಸರು ಅಥವಾ ನನ್ನ ಬ್ಯಾಂಕ ಖಾತಾ ನಂಬರ ನಮೂದು ಇಲ್ಲ ಎಂದರೆ ಸರಿ. ನಿಪಿ-2 ರ ದಾಖಲೆಯನ್ನು ನಾನು ಸೃಷ್ಟಿ ಮಾಡಿಕೊಂಡು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕನ ಮುಂಭಾಗ ಹಾಗೂ ಹಿಂಭಾಗದಲ್ಲಿ ಬ್ಯಾಂಕಿನ ಮೊಹರು ಅಥವಾ ಸಹಿ ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ಬ್ಯಾಂಕಿನಲ್ಲಿ ಚೆಕ್ಕನ್ನು ಹಾಜರು ಮಾಡಿದಾಗ ಬ್ಯಾಂಕಿನವರು ಡಿಪೊಸಿಟ್ ಸ್ಲಿಪ್ ಕೊಡುತ್ತಾರೆ ಎಂದರೆ ಸರಿ. ನಾನು ಆ ರೀತಿ ಸ್ಲಿಪ್ ನ್ನು ಹಾಜರು ಮಾಡಿಲ್ಲ ಎಂದರೆ ಸರಿ.

4. ದಿನಾಂಕಃ 13-12-2022 ರಂದು ಆರೋಪಿಗೆ ವಕೀಲರ ಮೂಲಕ ನೋಟಿಸು ಕಳುಹಿಸಿದ್ದೇನು. ನಿಪಿ-3 ರ ನೋಟಿಸಿನಲ್ಲಿ ನಾನು ಚೆಕ್ಕನ್ನು ಗೋಗಿ ಶಾಖೆಯ ಕೆನರಾ ಬ್ಯಾಂಕಿನಲ್ಲಿ ಹಾಜರು ಮಾಡಿದ್ದೇನು ಎಂದು ನಮೂದಿಸಲಾಗಿದೆ ಎಂದರೆ ಸರಿ. ನೀವು ಚೆಕ್ಕನ್ನು ಗೋಗಿ ಶಾಖೆಯಲ್ಲಿ ಹಾಜರು ಮಾಡಿದ್ದಿರಿಯೇ? ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-2 ರ ಹಿಂಬರಹದಲ್ಲಿ ಯಾದಗಿರಿ ಶಾಖೆಯ ಮೊಹರು ಇರುತ್ತದೆ ಎಂದರೆ ಸರಿ. ದಿನಾಂಕಃ 04-01-2023 ರಂದು ನೀವು ಆರೋಪಿಗೆ ಇನ್ನೊಂದು ನೋಟಿಸು ಕಳುಹಿಸಿದ್ದೀರಿ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

5. ನಾನು ವ್ಯವಸಾಯಗಾರನಾಗಿದ್ದೇನೆ. ಒಕ್ಕಲುತನ ಹೊರತುಪಡಿಸಿ ನಾನು ಬೇರೆ ಕೆಲಸ ಮಾಡುವುದಿಲ್ಲ ಎಂದರೆ ಸರಿ. ನಾನು 10 ಎಕರೆ ಸ್ವಂತ ಜಮೀನು ಹೊಂದಿದ್ದೇನೆ. ನನಗೆ ಸದರಿ ಕೃಷಿ ಆದಾಯ ಹೊರತುಪಡಿಸಿ ಬೇರೆ ಆದಾಯದ ಮೂಲ ಇರುವುದಿಲ್ಲ ಎಂದರೆ ಸರಿ. ನಾನು ಜಮೀನು ಹೊಂದಿರುವುದನ್ನು ತೋರಿಸಲು ಪಹಣಿ ಪತ್ರಿಕೆಗಳನ್ನು ಹಾಜರು ಮಾಡಿಲ್ಲ. ನಾನು ಯಾವುದೇ ಜಮೀನು ಹಾಗೂ ಆದಾಯ ಹೊಂದಿಲ್ಲ ಎಂದರೆ ಸರಿಯಲ್ಲ. ನಾನು ಕಳೆದ 4-5 ವರ್ಷಗಳಿಂದ ಸಕ್ಕರೆ ಹಾಗೂ ಹೃದಯ ಸಂಬಂಧಿ ಕಾಯಿಲೆಗೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೇನೆ. 4-5 ವರ್ಷಗಳಿಂದ ನನಗೆ ತಿರುಗಾಡಲು ಆಗುತ್ತಿಲ್ಲ ಹಾಗೂ ನಾನು ಎಲ್ಲಿಯೂ ಹೋಗುವುದಿಲ್ಲ ಎಂದರೆ ಸರಿ.

6. ದಿನಾಂಕಃ 15-04-2022 ರಂದು ಆರೋಪಿ ನನ್ನ ಹತ್ತಿರ ಸಾಲ ಕೇಳಿದ್ದರು. ಆ ಸಮಯದಲ್ಲಿ ನನ್ನ ಹೆಂಡತಿ ಹಾಗೂ ಇಬ್ಬರು ಮಕ್ಕಳು ಹಾಜರಿದ್ದರು. ನನ್ನ ಮಕ್ಕಳಾದ ಅರವಿಂದ ಹಾಗೂ ವಿಶಾಲರವರು ಹಾಜರಿದ್ದರು. ಸಂಸಾರದ ಅಡಚಣೆಗಾಗಿ ಆರೋಪಿ ಸಾಲ ಕೇಳಿದ್ದರು. ಸಾಲ ನೀಡುವ ಸಮಯದಲ್ಲಿ ಕರಾರು ಪತ್ರ ಮಾಡಿಕೊಂಡಿಲ್ಲ. ನನ್ನ ಹತ್ತಿರ ಆಗ 5 ಲಕ್ಷ ರೂ. ಇತ್ತು ಎಂಬುದನ್ನು ತೋರಿಸಲು ನಾನು ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ಅಷ್ಟು ಹಣವನ್ನು ಎಲ್ಲಿಂದ ತಂದಿರುತ್ತೀರಿ? ಎಂದರೆ ಸಾಕ್ಷಿ ನನ್ನ ಹೊಲದಲ್ಲಿ ಬೆಳೆದ ಹತ್ತಿ ಬೆಳೆಯಿಂದ ಬಂದ ಅದಾಯವನ್ನು ಮನೆಯಲ್ಲಿ ಇಟ್ಟುಕೊಂಡಿದ್ದೇನು ಎಂದು ನುಡಿಯುತ್ತಾರೆ. ಸನಃ 2022 ರಲ್ಲಿ ಹತ್ತಿ ಬೇಳೆ ಬೆಳೆದಿರುತ್ತೀರಾ? ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆಗ 61 ಕ್ವಿಂಟಲ ಹತ್ತಿ ಬೆಳೆ ಬಂದಿತ್ತು. ಸದರಿ ವಿಷಯವನ್ನು ರುಜುವಾತು ಪಡಿಸಲು ನಾನು ಬಿಲ್ ಅಥವಾ ರಶೀದಿ ಹಾಜರು ಮಾಡಿಲ್ಲ ಎಂದರೆ ಸರಿ. ಆರೋಪಿಗೆ ರೂ. 500/- ಮುಖ ಬೆಲೆಯ ನೋಟುಗಳನ್ನು ಕೊಟ್ಟಿದ್ದೇನೆ. ಆರೋಪಿ ನನಗೆ ಪರಿಚಯ ಇಲ್ಲದೆ ಇದ್ದರೂ ಹಾಗೂ ನನ್ನಿಂದ ಸಾಲ ಪಡೆದುಕೊಳ್ಳದೆ ಇದ್ದರೂ ನಾನು ಸುಳ್ಳು ಪ್ರಕರಣ ದಾಖಲು ಮಾಡಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

ಜೆ.ಎಮ್.ಎಫ್.ಸಿ, ಯಾದಗಿರಿ.